ಗುಡಿಸಲುಗಳಲ್ಲಿ ಮೂರು ಹಗಲು ಮೂರು ರಾತ್ರಿಗಳನ್ನು ಕಳೆಯಬೇಕಿದ್ದಿತು. ಜೊತೆಗೆ ಮದುವೆಯಾದ ಹೆಣ್ಣುಮಕ್ಕಳು ಗರ್ಭಿಣಿಯರಾದರೆ ಅವರು ಸೂತಕವೆಂಬ ಸಂಕಷ್ಟದಲ್ಲಿ ಹಟ್ಟಿಯಾಚೆ ಅದೇ ಗುಡಿಸಲಲ್ಲಿ ತಮಗೆ ತಾವೇ ಹೆರಿಗೆ ಮಾಡಿಕೊಳ್ಳಬೇಕು. ಹಗಲಿಗಿಂತಲೂ ಇರುಳು ಇನ್ನೂ ಅಪಾಯಕಾರಿ. ಒಮ್ಮೆ ಮಗುವನ್ನು ಪಡೆದ ಬಾಣಂತಿಯೊಬ್ಬಳು ಹಟ್ಟಿಯಾಚೆ ಹಾಗೆ ಮಲಗಿದ್ದು ರಾತ್ರಿ ಹಾವು ಕಚ್ಚಿ ತೀರಿಕೊಂಡು, ಮಗು ಬದುಕಿಬಿಟ್ಟಿತ್ತು. ಮಗು ತೀರಿಕೊಂಡು ತಾಯಿ ಬದುಕಿದ್ದುಂಟು ! ಈ ತಾಯಿ ಮಗು ಸಾವಿನ ಹಿಂಸೆ ಹೇಗಾದರೂ ಅದು ಅಸದಳವಾದುದು. ಈ ಬಗೆಯ ಮೌಢ್ಯ ನಾನು ಕಂಡಂತೆಯೇ ನೂರಾರು ಜೀವಗಳನ್ನು ಕೊಂದು ಹಾಕುತ್ತಿತ್ತು.

ಗೊಲ್ಲರ ಹಟ್ಟಿಗಳಲ್ಲಿ ಚಿಕ್ಕವಯಸ್ಸಿನ ಗರ್ಭಿಣಿಯರನ್ನು ಅವರ ಹೆರಿಗೆಯ ಘಳಿಗೆ ಬರುತ್ತಿದ್ದಂತೆಯೇ ಹಟ್ಟಿಯಾಚೆಯ ಗಬ್ಬದ ಗುಡಿಸಿಲಿಗೆ ಹಾಕಿಬಿಡುತ್ತಿದ್ದರು. ಹೆರಿಗೆಯ ಸಮಯದಲ್ಲಿ ಆಕೆಯ ಸುತ್ತ ಯಾರೂ ಇರುತ್ತಿರಲಿಲ್ಲ. ಆಕೆಯೇ ಬ್ರಹ್ಮಾಂಡ ನೋವು ನುಂಗಬೇಕು. ಹೆರಿಗೆಯಾಗಿ ಇಬ್ಬರಲ್ಲಿ ಯಾರು ಬೇಕಾದರೂ ಸಾಯಬಹುದು. ಸಾಯದೆ ಉಳಿದರೆ ಸೂತಕ ಕಳೆಯುವವರೆಗೆ ಮತ್ತೊಂದು ನರಕ ಕಾಣಬೇಕು. ಹಟ್ಟಿಯವರು ಅವಳಿಗೆ ಬೇಕಾದ ಆಹಾರ ಪದಾರ್ಥಗಳನ್ನೂ ಹತ್ತಿರ ತಂದುಕೊಡುವಂತಿಲ್ಲ. ದೂರದಲ್ಲೇ ಇಟ್ಟು ಹೋಗುವಂಥ ಪದ್ಧತಿ. ಮಗು ಹೆತ್ತವಳ ಹತ್ತಿರ ಹೋದರೂ ಮೈಲಿಗೆ. ತಾಯಿ ಹೆತ್ತ ಮಗು ಬಿಟ್ಟು ತೀರಿಕೊಂಡರೆ ರಾತ್ರಿಯೆಲ್ಲ ಹಾಲಿಲ್ಲದ ಮಗುವಿನ ಅಳು. ಮಗು ಸತ್ತು ತಾಯಿ ಬದುಕಿಕೊಂಡರೆ ರಾತ್ರಿಯೆಲ್ಲ ಹೆತ್ತ ಜೀವವನ್ನು ಕಳೆದುಕೊಂಡ ಬಾಣಂತಿಯ ಅಳು. ಈ ಪದ್ಧತಿ ತೀರ ಈಚೆಗೆ ನನಗೆ ಮಂಡ್ಯ ಸುತ್ತಿನ ಗೊಲ್ಲರ ಹಟ್ಟಿಗಳಲ್ಲಿಯೂ ಕಂಡು ಬಂದದ್ದುಂಟು.

ಚಿತ್ರದುರ್ಗ ಪ್ರದೇಶದ ನನ್ನ ಓಡಾಟದಲ್ಲಿ ಇವೆಲ್ಲವೂ ನಿರಂತರವಾಗಿ ಕಣ್ಣಿಗೆ ಬೀಳುತ್ತಲೇ ಇದ್ದವು. ಆದರೆ ಕೃಷ್ಣಶಾಸ್ತ್ರಿಗಳ ಪರಿಚಯಿಸಿದ ಸಿರಿಯಜ್ಜಿಯು ಎಂದೂ ಯಾವ ಬಗೆಯ ಮೂಢನಂಬಿಕೆಯನ್ನು ಆಚರಿಸಿದಂತೆ ಆ ಬಗ್ಗೆ ಆಕೆ ನನ್ನ ಮುಂದೆ ಮಾತನಾಡಿದಂತೆ ತೋರಿಬರಲೇ ಇಲ್ಲ. ಆಕೆ ಗಂಡನನ್ನು ಕಳೆದುಕೊಂಡಿದ್ದರೂ ತಾನು ವಿಧವೆಯಲ್ಲ ಎಂದು ತಿಳಿದಿದ್ದುದೇ ಅಲ್ಲದೆ, ಸೂತಕದ ಹೆಣ್ಣು ಮಕ್ಕಳನ್ನು ಹಟ್ಟಿಯಾಚೆ ಕೂರಿಸುತ್ತಿದ್ದುದರ ಬಗ್ಗೆ ಬಹಳ ಅಸಮಾಧಾನ ಹೊಂದಿದ್ದಳು. ಆದರೆ ಹಟ್ಟಿಯ ಒಟ್ಟು ನೀತಿಯ ವಿರುದ್ಧ ಅವಳು ಮಾತನಾಡುವುದು ಕಷ್ಟವಿದ್ದಿತು.

★★★

ನಾನು, ಕೃಷ್ಣಶಾಸ್ತ್ರಿಗಳು ಸಿರಿಯಜ್ಜಿಯನ್ನು ಕಂಡು, ಆಕೆ ಗುಡಿಸಲು ಮುಂದಿನ ದಿನ್ನೆಯ ಮೇಲೆ ಹಾಸಿದ ಕಂಬಳಿಗದ್ದಿಗೆಯ ಮೇಲೆ ಕುಳಿತೆವು. ಕೃಷ್ಣಶಾಸ್ತ್ರಿಗಳು ಅಜ್ಜಿಯನ್ನು ಕುರಿತು ಯಾವುದಾದರೂ ಪದಬರುವುದೇ ಎಂದು ಕೇಳಿದರು. ಸಿರಿಯಜ್ಜಿ ಯಾವುದೂ ಬರಲ್ವಲ್ಲ ದೊಡ್ಡಪ್ಪ ಎಂದಳು. ಶಾಸ್ತ್ರಿಗಳು "ಅಲ್ಲವ್ವಾ ನಿನ್ನ ಪದನ ಎಷ್ಟೋ ಕಡೆ ಕೇಳಿದ್ದೀನಲ್ಲವ್ವಾ" ಎಂದರು. ಅವರ ಮುಂದೆ ಹಾಡಲು ಆಕೆಗೆ ಯಾವ ಸಂಕೋಚವೂ ಇದ್ದಂತಿರಲಿಲ್ಲ. ಆಗುಂತುಕನಾದ, ಮೈಲಿಗೆಯವನಾದ ನನ್ನ ಮುಂದೆ ಹಾಡಲು ಇಷ್ಟವಿರಲಿಲ್ಲ.

ಸಿರಿಯಜ್ಜಿಯಿಂದ ಹಾಡಿಸುವ ಬಗೆಯಾದರೂ ಹೇಗೆ ಎಂಬ ಸಮಸ್ಯೆ ಹುಟ್ಟಿಕೊಂಡು ಕೃಷ್ಣಶಾಸ್ತ್ರಿಗಳು ಇವತ್ತು ಹಬ್ಬ, ನಿಮ್ಮಹಟ್ಟಿ ದೇವರ ಮೇಲೆ ಒಂದು ಪದ ಹೇಳು, ಸೋಬಾನೆ ಗೀಬಾನೆ ಪದ ಬೇಡ ಎಂದರು. ಯಾವಾಗ ಹಬ್ಬ, ಅವಳ ದೇವರು ಎಂದು ಶಾಸ್ತ್ರಿಗಳು